**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**CC No.1067/2024**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಯಶೋಧಾ ತಳವಾರ | ಪಿಡಬ್ಲ್ಯೂ | 01 |
| ತಂದೆ ಹೆಸರು | : | ರಾಜು | ಸಿ ಡಬ್ಲ್ಯೂ | 04 |
| ವಯಸ್ಸು | : | 36 ವರ್ಷ | | |
| ಉದ್ಯೋಗ | : | ಮನೆಕೆಲಸ | | |
| ವಾಸ ಸ್ಥಳ | : | ಚಿಕ್ಕೇರಿಹೊಸಳ್ಳಿ | | |

**ದಿನಾಂಕ: 01.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯು ಮೂಗಿ ಮತ್ತು ಅನಕ್ಷರಸ್ಥ ಆಗಿದ್ದರಿಂದ ಅವಳಿಗೆ ಚಿಹ್ನೆ ಮತ್ತು ಸಂಕೇತಗಳ ಮೂಲಕ ಸಾಕ್ಷ ವಿಚಾರಣೆ ಮಾಡಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಚಾಸಾ–1 ನನ್ನ ಸಹೋದರಿ. ಆರೋಪಿ ನನ್ನ ಗಂಡ. ನನ್ನ ಮತ್ತು ಆರೋಪಿಯ ಮಧ್ಯ ಯಾವತ್ತಿಗೂ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ ಹಾಗೂ ಆರೋಪಿ ನನಗೆ ಯಾವುದೇ ರೀತಿಯಿಂದ ಹಲ್ಲೆ ಮಾಡಿಲ್ಲ, ಹಾಗೂ ವರದಕ್ಷಿಣೆ ಕಿರುಕುಳ ನೀಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಜೀವದ ಬೆದರಿಕೆ ಹಾಕಿಲ್ಲ. ಚಾಸಾ–1 ರವರಿಗೆ ನಾನು ದೂರು ಕೊಡಲು ಯಾವತ್ತಿಗೂ ಹೇಳಿಲ್ಲ ಮತ್ತು ಅವಳು ಯಾವತ್ತಿಗೂ ದೂರು ಕೊಟ್ಟಿಲ್ಲ. ಬಹುಶಃ ಪೋಲಿಸರೇ ಚಾಸಾ–1 ರವರ ಸಹಿಯನ್ನು ಒಂದು ದಾಖಲೆಗೆ ತೆಗೆದುಕೊಂಡಿದ್ದರಬಹುದು ಆದರೆ ನನ್ನ ಮತ್ತು ಆರೋಪಿಯ ಮಧ್ಯ ಯಾವತ್ತಿಗೂ ಜಗಳ, ಹೊಡಿಬಡಿ ಮಾಡಿಲ್ಲ, ಭಿನ್ನಾಭಿಪ್ರಾಯ ಆಗಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ಸುಮಾರು 9 ವರ್ಷಗಳ ಹಿಂದೆ ಚಿಕ್ಕೇರಿ ಹೊಸಳ್ಳಿ ಗ್ರಾಮದ ರಾಜು ತಂದೆ ಬಸಪ್ಪ ತಳವಾರ ಇವನಿಗೆ ಕೊಟ್ಟು ಹಿರಿಯರ ಸಮಕ್ಷಮ ಮದುವೆ ಮಾಡಿಕೊಟ್ಟಿದ್ದು ಇರುತ್ತದೆ ಎಂದರೆ ಸರಿ. ನನ್ನ ಗಂಡನಾದ ರಾಜು ಇತನು ಹುಟ್ಟಿನಿಂದ ಮೂಕನಿರುತ್ತಾನೆ ಎಂದರೆ ಸರಿ. ಮತ್ತು ಮದುವೆಯಾದ ಮೊದಲು ಒಂದು ವರ್ಷದವರೆಗೆ ನನ್ನ ಜೊತೆ ಚೆನ್ನಾಗಿ ಸಂಸಾರ ಮಾಡಿಕೊಂಡು ಬಂದಿದ್ದಾನೆ ಎಂದರೆ ಸರಿ. ಹಾಗೂ ನಮ್ಮ ಇಬ್ಬರ ಸಂಸಾರದಿಂದ 2 ಹೆಣ್ಣು ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ಹಾಗೂ ಮದುವೆ ಕಾಲಕ್ಕೆ ನನ್ನ ಗಂಡನಿಗೆ ವರದಕ್ಷಿಣೆಯಾಗಿ 40 ಗ್ರಾಂ ಚಿನ್ನದ ಆಭರಣವನ್ನು ಕೊಟ್ಟು ಹಾಗೂ 50 ಸಾವಿರ ರೂಪಾಯಿಗಳನ್ನು ಉಡುಗೊರೆಯಾಗಿ ನೀಡಿದ್ದರು ಎಂದರೆ ಸರಿಯಲ್ಲ. ನಂತರದಲ್ಲಿ ನನ್ನ ಗಂಡ ನೀನು ನಿನ್ನ ತವರುಮನೆಯಿಂದ ಇನ್ನಷ್ಟು ವರದಕ್ಷಿಣೆಯಾಗಿ ಹಣವನ್ನು ತೆಗೆದುಕೊಂಡು ಬರಬೇಕು ಎಂದು ನನಗೆ ದಿನಾಲೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ಮತ್ತು ನೀನು 2 ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ್ದೀಯಾ ಅಂತಾ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ.

ದಿಃ 23.05.2023 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ನನ್ನ ಅಕ್ಕಳಾದ ಚಾಸಾ-1 ರವರು ನನ್ನ ಅಣ್ಣನಾದ ಚಾಸಾ-5, ನನ್ನ ಅತ್ತಿಗೆಯಾದ ಚಾಸಾ-6 ಇವರೆಲ್ಲರೂ ಕೂಡಿಕೊಂಡು ಮಾತನಾಡಿಸಲು ಅಂತಾ ಚಿಕ್ಕೇರಿಹೊಸಳ್ಳಿ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡನಾದ ರಾಜು ತಳವಾರ ನನ್ನ ಮೇಲೆ ಏಕಾಏಕಿ ಏರಿ ಬಂದು ಅವಾಚ್ಯ ಶಬ್ದಗಳಿಂದ ಬೈದಾಡಿ ನನ್ನ ಕಿವಿಗೆ ಬಲವಾಗಿ ಕೈಯಿಂದ ಹೊಡೆದಿದ್ದು, ಅಲ್ಲದೇ ಕೈ ಮುಷ್ಠಿ ಮಾಡಿ ಬಾಯಿಗೆ ಬಲವಾಗಿ ಹೊಡೆದು ಹಲ್ಲು ಮುರಿಯುವಂತೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಮತ್ತು ನನ್ನ ಗಂಡ ನನಗೆ ಕೈಯಿಂದ ಹೊಡಿಬಡಿ ಮಾಡಿ ಸಾದಾ ಸ್ವರೂಪದ ಗಾಯ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಮತ್ತು ನಿನ್ನ ತವರುಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬರಲಿಲ್ಲ ಎಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಲ್ಲೆಯಿಂದ ನಾನು ಹಾವೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ರವರು ಹಾನಗಲ್ ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಮತ್ತು ನಾನು ಸಹಿತ ಈ ಘಟನೆ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಅವರ ಹೇಳಿಕೆಯನ್ನು ಓದಿ ಹೇಳಿದ್ದು, ಸಾಕ್ಷಿ ಅದನ್ನು ನಿರಾಕರಿಸಿದ್ದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಸದರಿ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಿತ ಆರೋಪಿಯು ನನಗೆ ಗಂಡನಾಗಿದ್ದ ಕಾರಣ ಆರೋಪಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ, ಆದ್ದರಿಂದ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**:ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಅಂತಾ ಹೇಳಿರುತ್ತಾರೆ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್

ಎಲ್ಲಾ ದಾಖಲಾತಿಗಳನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

ಈಗ ಸಾಕ್ಷಿಗೆ ನಿಪಿ–1 ದೂರನ್ನು ತೋರಿಸಿದ್ದು ಸದರಿ ದೂರಿನ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು.

ಆರೋಪಿ ವಿರುದ್ದ ಸಂಪೂರ್ಣ ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಸದರಿ ಆರೋಪಿ ವಿರುದ್ಧ ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಆರೋಪಿಯ ಸ್ವಖುಷಿ ಹೇಳಿಕೆಯನ್ನು

ಅಂಕಿಸಂಖ್ಯೆಗೋಸ್ಕರ ಆರೋಪಿಯ ವಿರುದ್ದ ಯಾವುದೇ ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದ್ದರೂ ಸಹಿತ ಕೇವಲ ಅಂಕಿಸಂಖ್ಯೆಗೋಸ್ಕರ ಹಾಗೂ ಬೇವಾರಸಿ ಮುದ್ದೆಮಾಲುಗಳನ್ನು ವಿಲೇವಾರಿ ಮಾಡುವ ದುರುದ್ದೇಶದಿಂದ ನಾನು ಆರೋಪಿ ವಿರುದ್ದ ಒಂದು ಸುಳ್ಳು ಆರೋಪಿ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಚಕಬಂದಿ ಸಾಕ್ಷಿಯ ತನಿಖಾಧಿಕಾರಿ ಆಗಿದ್ದರಿಂದ ಅವರಿಗೆ ನೆನಪು ಮೆಲಕು ಪುನರ್ಮನನ ಮಾಡಲು ದಾಖಲಾತಿಗಳನ್ನು ನೋಡುವ ಅಧಿಕಾರ ಹೊಂದಿದ್ದು ದಾಖಲಾತಿ ನೋಡಿ ಉತ್ತರಿಸುತ್ತಾರೆ.

ಈ ಕೇಸಿಗೂ, ಕೇಸಿನ ಮುದ್ದೆಮಾಲಿಗೂ ಹಾಗೂ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.